ಡಿ ಡಬ್ಲ್ಯು 02

*ದಿನಾಂಕ:01-02-2020 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಮಾಡಿಸಲಾಯಿತು.*

**ಪಾಟೀ ಸವಾಲುಃವಾದಿ ಪರ ವಕೀಲರಿಂದಃ**

ಪ್ರಕರಣ ದಾಖಲು ಮಾಡಿರುವ ಪರಮೇಶ್ವರಪ್ಪ ಮತ್ತು ಇತರರ ಬಗ್ಗೆ ನಾನು ತಿಳಿದುಕೊಂಡಿದ್ದೇನೆ. ಅವರ ತಂದೆ ಹೆಸರು ಹನುಮಪ್ಪ. ಸಾಕ್ಷಿ ಮುಂದುವರಿದು ಮರೆತುಹೋಗಿದೆ ಎನ್ನುತ್ತಾರೆ. ಅವರ ತಂದೆ ಹೆಸರು ಮರಳಪ್ಪ ಎಂದರೆ ಸರಿ. ಮರುಳಪ್ಪನಿಗೆ 5 ಜನ ಮಕ್ಕಳು. ಅವರೆಂದರೆ ವಾದಿಯರು ಮತ್ತು 1ನೇ ಪ್ರತಿವಾದಿ ಹಾಗೂ ರಾಜಪ್ಪ ಆಗಿರುತ್ತಾರೆಂದರೆ ಸರಿ. ಅವರಿಗೆ 10 ಎಕರೆ ಜಮೀನು ಇತ್ತು. ಸಾಕ್ಷಿ ಇಬ್ಬರು ಅಣ್ಣತಮ್ಮಂದಿರಿಗೆ 10 ಎಕರೆ ಇತ್ತು ಎನ್ನುತ್ತಾರೆ. ಮರುಳಪ್ಪನಿಗೆ 6 ಎಕರೆ ಜಮೀನು ಬಂದಿರುತ್ತದೆ. ತಿಪ್ಪಗೊಂಡನಹಳ್ಳಿ ಸರ್ವೆ ನಂಃ 118 ರಲ್ಲಿ ಸುಮಾರು 6 ಎಕರೆ ಜಮೀನು ಬಂದಿರುತ್ತದೆ. ಅಣ್ಣೇಗ್ರಾಮದಲ್ಲಿ ಕೂಡಾ ಜಮೀನು ಬಂದಿದೆ. ಅದರಲ್ಲಿ ಎಷ್ಟು ಮತ್ತು ಯಾವ ಸರ್ವೆ ನಂಬರು ಎಂದು ಗೊತ್ತಿಲ್ಲ. ಈ ರೀತಿ ಅವರಿಗೆ ಆಸ್ತಿ ಬಂದ ಬಗ್ಗೆ ದಾಖಲೆ ನೋಡಿಲ್ಲ. ಮರುಳಪ್ಪನ ಕುಟುಂಬಕ್ಕೆ ಎಷ್ಟು ಆಸ್ತಿ ಹೇಗೆ ಬಂದಿದೆ ಎಂಬುದರ ಬಗ್ಗೆ ದಾಖಲೆ ನೋಡಿಲ್ಲ ಎಂದರೆ ಸರಿ. ನಾನು ಅದನ್ನು ತಿಳಿದುಕೊಳ್ಳಲು ಪ್ರಯತ್ನ ಮಾಡಿಲ್ಲ. ಪ್ರಕರಣಕ್ಕೆ ತಕರಾರು ಹಾಕಿಸಿದ್ದೇವೆ. ಅದರಲ್ಲಿ ಮರುಳಪ್ಪನವರಿಗೆ ಹೇಗೆ ಆಸ್ತಿ ಬಂದವು ಎಂಬ ವಿಚಾರವನ್ನು ಹೇಳಿರುವುದಿಲ್ಲ ಹಾಗೂ ಅವರಿಗೆ ವಿಭಾಗ ಯಾವಾಗ ಆಯ್ತು ಎಂದು ಕೂಡಾ ನಾನು ತಿಳಿದುಕೊಳ್ಳುವ ಪ್ರಯತ್ನ ಮಾಡಿಲ್ಲ. ಮರುಳಪ್ಪನವರಿಗೆ ಹಿಸ್ಸೆಯಲ್ಲಿ ಎಷ್ಟು ಜಮೀನು ಬಂತು ಎಂದು ಗೊತ್ತಿಲ್ಲ. ವಾದಿಗಳು ಆಸ್ತಿಗಳನ್ನು ಮಾರಾಟ ಮಾಡಿದ್ದಾರೆ. ಸರ್ವೆ ನಂಬರು ಗೊತ್ತಿಲ್ಲ. ಯಾರ್ಯಾರಿಗೆ ಮಾರಾಟ ಮಾಡಿದ್ದಾರೆಂದು ಗೊತ್ತಿಲ್ಲ.

ಅತ್ತಿಮೊಗ್ಗೆ ಮತ್ತು ಅಣ್ಣೇಗ್ರಾಮಕ್ಕೆ 3 ಕಿ. ಮೀಟರ್ ದೂರ ಇರುತ್ತದೆ. ಸದರಿ ಊರುಗಳ ಜಮೀನುಗಳು ಅಕ್ಕಪಕ್ಕದಲ್ಲಿ ಇರುತ್ತದೆ. ನಾವು ಆಸ್ತಿಗಳನ್ನು ಮಾರಾಟ ಮಾಡಿದ ವಿಚಾರವನ್ನು ತಕರಾರಿನಲ್ಲಿ ಹೇಳಿಲ್ಲ ಸಾಕ್ಷಿ ಮುಂದುವರಿದು ನಮಗೆ ಮಾರಾಟ ಮಾಡಿದ ರಾಜಪ್ಪನವರ ವಿಚಾರವನ್ನು ತಕರಾರಿನಲ್ಲಿ ಹೇಳಿದ್ದೇವೆ. ಅವರಿಗೆ ವಿಭಾಗದಲ್ಲಿ ಆಸ್ತಿ ಬಂದಿರುತ್ತದೆ. ರಾಜಪ್ಪ ಮತ್ತು ಅವರ ಸಹೋದರರು ವಿಭಾಗ ಮಾಡಿಕೊಂಡಿದ್ದರ ಮೇಲೆ ಅವರಿಗೆ ಆಸ್ತಿ ಬಂದಿತ್ತು. ನಾನು ವಿಭಾಗ ಪತ್ರವನ್ನು ನೋಡಿ ರಾಜಪ್ಪನವರಿಗೆ ಆಸ್ತಿ ಬಂದಿದ್ದರಿಂದ ಆಸ್ತಿ ಖರೀದಿ ಮಾಡಿದ್ದೇನೆ. ಅವರು ವಿಭಾಗ ಯಾವ ವರ್ಷ

ಮಾಡಿಕೊಂಡು ಎಂದು ಗೊತ್ತಿಲ್ಲ. ಸಾಕ್ಷಿ ನಾನು *1976* ರಲ್ಲಿ ಖರೀದಿ ಮಾಡಿದ್ದೇನೆಂದು ಹೇಳುತ್ತಾರೆ. ಯಾವ ಆಧಾರದ ಮೇಲೆ ರಾಜಪ್ಪನಿಗೆ ಖಾತೆ ಬದಲಾಗಿತ್ತು ಎಂದು ನಾನು ತಿಳಿದುಕೊಂಡಿಲ್ಲ. ಸಾಕ್ಷಿ ಅನಂತರ ಪಾಲು ಪಾರಿಕತ್ತಿನಲ್ಲಿ ಆಸ್ತಿ ಬಂದಿದೆ ಎಂದು ನಮಗೆ ತೋರಿಸಿದ್ದಾರೆಂದು ಹೇಳುತ್ತಾರೆ. ಪಾಲು ಪಾರಿಕತ್ತು ದಾಖಲೆಯನ್ನು ನಾನು ತೆಗೆದುಕೊಂಡಿಲ್ಲ. ಈ ದಾವೆ ದಾಖಲು ಮಾಡಿದ ನಂತರ ಕೂಡಾ ರಾಜಪ್ಪನವರಿಗೆ ವಿಭಾಗದಲ್ಲಿ ಆಸ್ತಿ ಬಂದಿದ್ದನ್ನು ತೋರಿಸಲು ದಾಖಲೆ ಪಡೆದುಕೊಂಡಿಲ್ಲ. ವಾದಿಗಳನ್ನು ಖರೀದಿ ಮಾಡುವ ಮೊದಲು ಈ ಬಗ್ಗೆ ವಿಚಾರಿಸಿರುವುದಿಲ್ಲ. ದಾವಾ ಆಸ್ತಿ ಅವರ ಕುಟುಂಬಕ್ಕೆ ಸೇರಿದ್ದು ಎಂದು ಗೊತ್ತಿತ್ತು ಎಂದರೆ ಸರಿ. ಸಾಕ್ಷಿ ಮುಂದುವರಿದು ಅವರು ಮೊದಲೇ ವಿಭಾಗ ಮಾಡಿಕೊಂಡಿದ್ದರು ಎಂದು ಹೇಳುತ್ತಾರೆ. ರಾಜಪ್ಪನವರಿಗೆ ಯಾವ ರೀತಿ ಆಸ್ತಿ ಹೋಗಿತ್ತು ಎಂದು ಕೇಳಿ ತಿಳಿದುಕೊಂಡಿದ್ದೀರಾ ಎಂದರೆ ಸಾಕ್ಷಿದಾರರು ಅವರ ತಂದೆಯಿಂದ ಬಂದಿತ್ತು ಎಂದು ಹೇಳಿದ್ದಾರೆ ಎಂದು ಹೇಳುತ್ತಾರೆ. ರಾಜಪ್ಪನವರ ಅಜ್ಜ ದಾನ ಪತ್ರ ಬರೆದುಕೊಟ್ಟಿದ್ದರು ಎಂದರೆ ನನಗೆ ಗೊತ್ತಿಲ್ಲ. ಅದರ ಆಧಾರದ ಮೇಲೆ ಅವರ ಹೆಸರಿಗೆ ಖಾತೆ ಆಗಿತ್ತು ಎಂದರೆ ನನಗೆ ಗೊತ್ತಿಲ್ಲ. ಸದರಿ ದಾನ ಪತ್ರವನ್ನು ಪ್ರಶ್ನಿಸಿ ಅಸಲು ದಾವಾ ನಂಃ *239/1967* ರಂತೆ ಪ್ರಕರಣ ದಾಖಲಾಗಿತ್ತು ಎಂದರೆ ನನಗೆ ಗೊತ್ತಿಲ್ಲ. ಸದರಿ ಪ್ರಕರಣದಲ್ಲಿ ದಾನ ಪತ್ರ ಮಾಡಿರುವುದು ತಪ್ಪಾಗಿದೆ ಎಂದು ತೀರ್ಮಾನವಾಗಿದೆ ಎಂದರೆ ಗೊತ್ತಿಲ್ಲ. ರಾಜಪ್ಪ ಮತ್ತು ಅವರ ಸಹೋದರರ ನಡುವೆ ಯಾವುದೇ ಕಾಲಕ್ಕೂ ವಿಭಾಗ ಆಗಿರಲಿಲ್ಲ ಎಂದರೆ ಸರಿಯಲ್ಲ. ರಾಜಪ್ಪನ ಹೆಸರಿಗೆ ವಿಭಾಗ ಪತ್ರದ ಆಧಾರದ ಮೇಲೆ ಖಾತೆ ಬದಲಾಗಿದೆ ಎಂದು ತೋರಿಸಲು ದಾಖಲೆ ಕೊಟ್ಟಿಲ್ಲ. ಈವರೆಗೆ ಯಾವ ರೀತಿ ರಾಜಪ್ಪನಿಗೆ ದಾಖಲೆ ಬಂದಿರುತ್ತದೆ ಎಂದು ತಿಳಿದುಕೊಳ್ಳಲು ಪ್ರಯತ್ನ ಮಾಡಲಿಲ್ಲ. *1* ರಿಂದ *3* ವಾದಿಗಳು ಮತ್ತು *1* ನೇ ಪ್ರತಿವಾದಿರವರ ನಡುವೆ ದಾವಾ ಆಸ್ತಿಗೆ ಸಂಬಂಧಿಸಿದಂತೆ ಹಿಸ್ಸೆ ಮಾಡಿಕೊಂಡಿರುತ್ತಾರೆ. ಅವರು ಏನು ವ್ಯವಹಾರ ಮಾಡಿಕೊಂಡಿದ್ದಾರೆಂದು ಗೊತ್ತಿಲ್ಲ. ಒಬ್ಬೊಬ್ಬರಿಗೆ ಎಷ್ಟು ಜಮೀನು ಬಂದಿತ್ತು ಎಂದು ಗೊತ್ತಿಲ್ಲ ಸಾಕ್ಷಿ ರಾಜಪ್ಪನಿಗೆ ಮಾತ್ರ *30* ಗುಂಟೆ ಬಂದಿತ್ತು ಎಂದು ಹೇಳುತ್ತಾರೆ, ಯಾರ್ಯಾರಿಗೆ, ಯಾವ್ಯಾವ ಸರ್ವೆ ನಂಬರಿನಲ್ಲಿ ಎಷ್ಟು ಆಸ್ತಿ ಬಂದಿದೆ ಎಂದು ನೋಡಿಲ್ಲ.

ರಾಜಪ್ಪನಿಗೆ ಅಣ್ಣೇಗ್ರಾಮದ ಜಮೀನಿನಲ್ಲಿ ಪಾಲು ಬಂದಿತ್ತು. ಅದರ ಸರ್ವೆ ನಂಃ *10/1* ಆಗಿರುತ್ತದೆ. ಸದರಿ ಸರ್ವೆ ನಂಬರು ಒಟ್ಟು ಎಷ್ಟು ಇದೆ ಎಂದು ಗೊತ್ತಿಲ್ಲ ಸಾಕ್ಷಿ ನಾನು *30* ಗುಂಟೆ ಖರೀದಿಸಿರುತ್ತೇನೆಂದು ಹೇಳುತ್ತಾರೆ. ಮರುಳಪ್ಪನವರ ಕುಟುಂಬಕ್ಕೆ ಅಣ್ಣೇಗ್ರಾಮದಲ್ಲಿ ಸರ್ವೆ ನಂಃ *10/1* ರಲ್ಲಿ ಎಷ್ಟು ಜಮೀನು ಇತ್ತು ಎಂದು ನನಗೆ

ಗೊತ್ತಿಲ್ಲ. ಸ ನಂಃ *10/1* ಹಿಸ್ಸೆಯಾಗಿ, ಪೋಡಿಯಾಗಿದೆ. ಅದು ಮುಂಚೆ ಆಗಿತ್ತು ನಾನೂ ಕೂಡಾ ಅನಂತರ ಮಾಡಿಸಿದ್ದೇನೆ. ಮುಂಚೆ ಅಂದರೆ *1976* ಕ್ಕಿಂತ ಮೊದಲು ಆಗಿತ್ತು. ಸರ್ವೆ ನಂಃ *10/1* ಎಷ್ಟು ಭಾಗ ಆಗಿತ್ತು ಎಂದು ಗೊತ್ತಿಲ್ಲ. ಖರೀದಿ ಮಾಡುವ ಮೊದಲು ನಾನು ಸರ್ವೆ ಮಾಡಿಸಿಲ್ಲ. ಅಕ್ಕಪಕ್ಕದಲ್ಲಿದ್ದ ಮರುಳಪ್ಪನವರ ವಾರಸುದಾರರನ್ನು ನಾನು ವಿಚಾರಿಸಿರುವುದಿಲ್ಲ. ಸರ್ವೆ ನಂಃ *10/1* ರಲ್ಲಿ ಬೇರೆ ಬೇರೆಯವರು ಆಸ್ತಿ ಖರೀದಿ ಮಾಡಿದ್ದಾರೆನ್ನುವ ಬಗ್ಗೆ ನಾನು ದಾಖಲೆ ನೋಡಿಲ್ಲ. ಮರುಳಪ್ಪನವರ ಕುಟುಂಬದವರು ಬೇರೆಯವರಿಗೆ ಯಾರ್ಯಾರಿಗೆ ಎಷ್ಟು ಆಸ್ತಿ ಮಾರಾಟ ಮಾಡಿದ್ದಾರೆಂದು ಗೊತ್ತಿಲ್ಲ. ಸಾಕ್ಷಿ ಮುಂದುವರಿದು ಬೇರೆ ಕಡೆ ನಮಗೆ ಮಾತ್ರ *4* ವರೆ ಎಕರೆ ಖರೀದಿ ಮಾಡಿರುತ್ತೇನೆ ಎಂದು ಹೇಳುತ್ತಾರೆ. ಅದನ್ನು ಮರುಳಪ್ಪನವರಿಂದ ಖರೀದಿ ಮಾಡಿದ್ದೇನೆ. ಹೇಳಿಕೆಯಲ್ಲಿ ಇಂತಹ ವ್ಯಕ್ತಿಯೇ, ಇಂತಹ ಸರ್ವೆ ನಂಬರಿನಲ್ಲಿ ಮತ್ತು ಇಷ್ಟು ವಿಸ್ತೀರ್ಣವನ್ನು ಮಾರಾಟ ಮಾಡಲಾಗಿದೆ ಎಂದು ಹೇಳಿರುವುದಿಲ್ಲ.

ಮರುಳಪ್ಪನವರ ಮಕ್ಕಳಿಗೆ ಆಸ್ತಿಯಲ್ಲಿ ಹಕ್ಕು ಇದೆ ಎಂಬುದರ ಬಗ್ಗೆ ನಿಮ್ಮ ತಕರಾರು ಇಲ್ಲವೆಂದರೆ ಸಾಕ್ಷಿ ಹೌದು ಎನ್ನುತ್ತಾರೆ. ವಾದಿಗಳು ನನ್ನ ಕ್ರಯಪತ್ರಕ್ಕೆ ಸಹಿ ಮಾಡಿಲ್ಲವೆಂದರೆ ಸರಿ. ನಾನು ಅವರ ಒಪ್ಪಿಗೆಯನ್ನು ಕೇಳಿಲ್ಲವೆಂದರೆ ಸರಿ. ಓಂಕಾರಪ್ಪ ಮೊದಲಿನಿಂದ ಭದ್ರಾವತಿಯಲ್ಲಿ ವಾಸವಿದ್ದಾರೆಂದರೆ ಗೊತ್ತಿಲ್ಲ. ಅವರ ಮಕ್ಕಳು ತರೀಕೆರೆಯಲ್ಲಿ ವಾಸವಿದ್ದಾರೆಂದರೆ ಗೊತ್ತಿಲ್ಲ. ಮಾರಾಟದ ಬಗ್ಗೆ ನಾನು ಅವರಿಗೆ ಮಾಹಿತಿ ತಿಳಿಸಿಲ್ಲವೆಂದರೆ ಸರಿ. ತೆಗೆದುಕೊಳ್ಳುವಾಗ ಅವರ ಅಪ್ಪ ಇದ್ದರು, ಅವರು ಮಾರಾಟ ಮಾಡಿದ್ದಾರೆಂದು ಹೇಳುತ್ತಾರೆ.

**(ಮುಂದುವರಿದ ಪಾಟೀ ಸವಾಲಿಗೆ ಸಮಯ ಕೋರಿದ್ದು, ನೀಡಲಾಯ್ತು.)**

*(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)*

*ಓ ಹೇ ಕೇ ಸ ಇ ಎ ಒ*

ಸಹಿ/-

**(ಎಂ ಸಿ ನಂಜೇಗೌಡ)**
**ಹಿರಿಯ ಸಿವಿಲ್ ನ್ಯಾಯಾಧೀಶರು,**
**ತರೀಕೆರೆ.**